

# ಕನ್ನಡಿಯಲ್ಲಿ ಮುಖ ನೋಡಿಕೋ ಎಂದವಳಿಗೆ ಉತ್ತರ ಕೊಟ್ಟೆ

**ಚೈತ್ರಶ್ರೀ ಎಸ್**

ಉದಯದ 'ಆಕೃತಿ'ಯ ಭೈರವಿ

◆ **ಬಿಡುವಿನ ನಂತರ ಮತ್ತೆ ಬಣ್ಣದ ಒಲವು ಮೂಡಿದ್ದು ಏಕೆ?**

'ಮೌನರಾಗ' ಮುಗಿದ ಮೇಲೆ ಬ್ರೇಕ್ ತೆಗೆದುಕೊಂಡಿದ್ದೆ. ಶಿಕ್ಷಣವನ್ನು ಪೂರೈಸಿ ಅಧ್ಯಾಪನ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳಬೇಕು ಎನ್ನುವ ಯೋಚನೆ ಇತ್ತು. ಈ ಕಥೆಯನ್ನು ಕೇಳಿದ ಮೇಲೆ ತುಂಬ ಇಷ್ಟ ಆಯ್ತು. ಮಾಡೋಣ ಎಂದು ಮತ್ತೆ ಬಂದಿದ್ದೇನೆ. ಪಾತ್ರ ತುಂಬ ಚೆನ್ನಾಗಿದೆ ಎನ್ನುವ ಖುಷಿಗೆ ಬಣ್ಣ ಹಚ್ಚಿದೆ. ಎಂಬಿಎಗೆ ಸೇರಬೇಕು ಎನ್ನುವ ಯೋಚನೆ ಇದೆ. ಅದರ ಜೊತೆ ನಟನೆಯಲ್ಲೂ ಸಮತೋಲನ ಕಾಪಾಡಬೇಕು ಎಂದುಕೊಂಡಿದ್ದೇನೆ. ನಮ್ಮ ಮನೆಯಲ್ಲಿ ಶಿಕ್ಷಣಕ್ಕೆ ಆದ್ಯತೆ ಕೊಡಲು ಹೇಳುತ್ತಿದ್ದಾರೆ. ಒಮ್ಮೊಮ್ಮೆ ಇದೆಲ್ಲ ಗೊಂದಲ ಅನಿಸುತ್ತದೆ. ಸಿನಿಮಾಕ್ಕೂ ಅವಕಾಶ ಬಂದಿತ್ತು. ಕೈಗೂಡಲಿಲ್ಲ. ಈಗ ಸಿನಿಮಾ ಬಗ್ಗೆ ಯೋಚನೆ ಇಲ್ಲ. ಧಾರಾವಾಹಿಗಳನ್ನು ಮಾತ್ರ ಮಾಡಬೇಕು ಎಂದು ಅಂದುಕೊಂಡಿದ್ದೇನೆ.

◆ **ಮೊದಲ ಅವಕಾಶ ನಿಮಗೆ ಹೇಗೆ ಸಿಕ್ಕಿತು?**

ಓದಿನ ಆಸಕ್ತಿ ಅಷ್ಟಕ್ಕಷ್ಟೆ ಎನ್ನುವ ಹೊತ್ತಿನಲ್ಲಿ ನನಗೆ ಪರಿಚಿತ ನಟ ಸಿದ್ಧಾರ್ಥ ಅವರ ಬಳಿ ನಟಿಸುವ ಅಪೇಕ್ಷೆ ವ್ಯಕ್ತಪಡಿಸಿದ್ದೆ. ಅವರು ನನಗೆ ಸಹನಟಿಯ ಅವಕಾಶ ಇದೆ ನೋಡು ಎಂದು ಹೇಳಿ ಕಳಿಸಿದರು. ಆಡಿಷನ್ ನೀಡಿದೆ. ನನಗೆ ನಾಯಕಿ ಪಾತ್ರ ನೀಡಿದರು. ಅದನ್ನು ನಿರೀಕ್ಷೆಯನ್ನೇ ಮಾಡಿರಲಿಲ್ಲ. ಅದು ನನ್ನ ಅದೃಷ್ಟವೋ ಏನೋ ಗೊತ್ತಿಲ್ಲ. ಆಮೇಲೆ ನನಗೆ ಯಾವ ಪಾತ್ರಗಳೂ ಇಷ್ಟ ಆಗಿರಲಿಲ್ಲ. ಹಾಗಾಗಿ ಸ್ವಲ್ಪ ದೂರವೇ ಉಳಿದಿದ್ದೆ. ಉದಯದಲ್ಲಿ 'ಭೈರವಿ' ಪಾತ್ರಕ್ಕೆ ಅವಕಾಶ ಸಿಕ್ಕಿತು.

◆ **ನಟನೆಯನ್ನು ರೂಢಿಸಿಕೊಂಡಿದ್ದು ಹೇಗೆ?**

ನಾನು ನಟನೆಯ ತರಬೇತಿ ಪಡೆದಿಲ್ಲ. ತರಬೇತಿ ಪಡೆದು ನಟನೆ ಮಾಡಬೇಕಾ ಎನ್ನುವುದೂ ಗೊತ್ತಿಲ್ಲ. ಕೊಟ್ಟ ಪಾತ್ರ ಮತ್ತು ನೀಡಿದ ನಿರ್ದೇಶನವನ್ನು ಅಚ್ಚುಕಟ್ಟಾಗಿ ಅನುಸರಿಸುತ್ತೇನೆ. ಡಾನ್ಸ್ ಕೂಡ ಕಲಿತಿಲ್ಲ. ಅಂತಹ ಸನ್ನಿವೇಶಗಳು ಬಂದಾಗಲೂ ಹೇಳಿದ್ದನ್ನು ಮಾಡುತ್ತೇನೆ. ಮೊದಲು ನಾನು ಕ್ಯಾಮೆರಾ ಎದುರಿಸಿದ್ದು ಧಾರಾವಾಹಿಗೆ ಬಣ್ಣ ಹಚ್ಚಿದ ನಂತರವೇ. ಅಭಿನಯಕ್ಕೆ ನನಗೆ ಸ್ಫೂರ್ತಿ ಅಂತಾನೂ ಯಾರೂ ಇಲ್ಲ. ಸಹಜವಾಗಿ ನಟನೆಯನ್ನು ಮಾಡುತ್ತಿದ್ದೇನೆ ಅಷ್ಟೇ. ನಟನೆಯನ್ನು ಅಭ್ಯಾಸ ಮಾಡಬೇಕೆ ವಿನಃ ಅದಕ್ಕೆ ತರಗತಿ ಬೇಕು ಎಂದು ನನಗೆ ಅನ್ನಿಸುವುದಿಲ್ಲ. ಪ್ರಯತ್ನದಿಂದಲೇ ಅದೆಲ್ಲ ರೂಢಿಯಾಗುತ್ತದೆ.

◆ **ಗ್ಲಾಮರ್ ಜಗತ್ತಿನಲ್ಲಿ ಸನ್ಯಾಸಿನಿ ಪಾತ್ರ ನಿರ್ವಹಿಸುತ್ತಿದ್ದೀರಿ...**

ಈ ಪಾತ್ರವನ್ನು ಒಪ್ಪಲು ಇಂತಹ ಸ್ವರೂಪವೇ ಕಾರಣ. ಲವ್ ಇಲ್ಲ, ರೊಮ್ಯಾನ್ಸ್ ಇಲ್ಲ, ಶಾಂತ ಸ್ವಭಾವದ ಪಾತ್ರ. ಏನೋ ಕಲಿಯುತ್ತಿದ್ದೇನೆ ಎಂದು ಅನ್ನಿಸಿದೆ. ಈ ಪಾತ್ರವೇ ಕುತೂಹಲದ ಕಣಜದಂತಿದೆ. ಸ್ವತಃ ನನಗೆ ನಾನೇನೇ ದೆವ್ವನಾ ಎನ್ನುವಷ್ಟು ಸಂದೇಹ ಮೂಡಿದೆ. ಕೆಲವರು ನನಗೇಕೆ ದೆವ್ವ ಕಾಡುವುದಿಲ್ಲ ಎಂದೂ ಕೇಳುತ್ತಾರೆ. ಒಬ್ಬ ವೀಕ್ಷಕಿಯಾಗಿ ಹೇಳುವುದಾದರೂ ಇದು ಚೆನ್ನಾಗಿದೆ ಎಂದು ಅನ್ನಿಸುತ್ತದೆ. ಪಾತ್ರ ಸಾವಾಲಿನಿಂದ ಕೂಡಿರಬೇಕು ಎಂದು ಭಾವಿಸುತ್ತೇನೆ. ದೆವ್ವ–ಭೂತಗಳು ಇಲ್ಲವೇ ದುಃಖದ ಸನ್ನಿವೇಶಗಳನ್ನು ನಿರ್ವಹಿಸುವ ಆಸೆ ಇದೆ.

◆ **ನಟಿಯಾದ ನಂತರ ನಿಮ್ಮಲ್ಲಿ ಆದ ಬದಲಾವಣೆ ಏನು?**

ಆ್ಯಟಿಟ್ಯೂಡ್ ಸ್ವಲ್ಪ ಬಂದಿದೆ. ನಟನೆಯನ್ನು ಮಾಡ್ತೀನಿ ಎನ್ನುವ ವಿಶ್ವಾಸವೂ ಬಂದಿದೆ. ಇದಾವುದೂ ಶಾಶ್ವತವಲ್ಲ. ಕಾಲಾನಂತರ ಏನೂ ಉಳಿಯುವುದಿಲ್ಲ. ಎಷ್ಟೋ ಜನ ಆಡಿಷನ್ ನೀಡಿರುತ್ತಾರೆ. ಅಂತಹದರಲ್ಲಿ ನನಗೆ ನಿರಾಯಾಸವಾಗಿ ಅವಕಾಶ ಸಿಕ್ಕಿದೆ ಅಂದರೆ ಅದು ನನ್ನ ಲಕ್. ಶಾಲಾ ದಿನಗಳಲ್ಲಿಯೇ ಸೀರಿಯಲ್ ಮಾಡುವ ಆಸೆ ಇತ್ತು. ಆಗ ನನ್ನ ಗೆಳತಿಯೊಬ್ಬಳು ಅಭಿನಯಿಸುತ್ತಿದ್ದಳು. ಅವಳ ಬಳಿ ನನ್ನ ಆಸೆ ಹೇಳಿಕೊಂಡಿದ್ದೆ. ಆಗವಳು 'ನಿನ್ನ ಯೋಗ್ಯತೆಗೆ ಯಾರು ಕೊಡ್ತಾರೆ, ಹೋಗಿ ಕನ್ನಡಿಯಲ್ಲಿ ಮುಖ ನೋಡಿಕೋ' ಎಂದಿದ್ದಳು. ಈಗಲೂ ಆಕೆ ನನ್ನ ಗೆಳತಿ, ಅವಳಿಗೆ ನನ್ನ ನಟನೆಯಿಂದಲೇ ಉತ್ತರ ಕೊಟ್ಟಿದ್ದೇನೆ ಎಂದು ಭಾವಿಸಿದ್ದೇನೆ.

◆ **ನಿಮ್ಮ ಪಾತ್ರದ ಬಗ್ಗೆ ಹೇಳುವುದಾದರೆ?**

ವೈಯಕ್ತಿಕವಾಗಿ ನನ್ನ ತದ್ವಿರುದ್ಧ ಗುಣ ಭೈರವಿಯದು. ಇಷ್ಟು ದೊಡ್ಡ ಪಾತ್ರವನ್ನು ನಿರ್ವಹಿಸುತ್ತಿರುವುದು ಹೆಮ್ಮೆ ಅನ್ನಿಸಿದೆ. ಇಲ್ಲಿ ತ್ರಿಕೋನ ಪ್ರೀತಿ ನಡೆಯುತ್ತಿದೆ. ಹೀಗಿರುವಾಗ ನಾನು ಯಾರನ್ನಾದರೂ ಪ್ರೀತಿಸುತ್ತೇನಾ ಎನ್ನುವ ಕುತೂಹಲವನ್ನು ಇದು ಉಳಿಸಿಕೊಂಡೇ ಸಾಗುತ್ತಿದೆ. ಮಂತ್ರವಾದಿಯನ್ನು ಮೀರಿದ ಶಕ್ತಿ ಭೈರವಿ ಹತ್ತಿರ ಇದೆ. ಆತನಿಗೆ ಹಲವು ವರ್ಷದ ಅನುಭವ ಇದೆ. ಆದರೂ ಅವನನ್ನು ಎದುರಿಸುವ ಧೈರ್ಯ ಇದೆ. ಇಂತಹ ಶಕ್ತಿ ಹೇಗೆ ನನಗೆ ಬಂತು. ದೆವ್ವಕ್ಕೂ ನನಗೂ ಏನೂ ಸಂಬಂಧ. ದೆವ್ವದ ಚಲನೆ ನನಗೆ ಹೇಗೆ ಗೊತ್ತಾಗುತ್ತದೆ. ಭೀತಿಯ ಸಂದರ್ಭದಲ್ಲೂ ತುಂಬ ವಿಶ್ವಾಸದಿಂದ ಇರುತ್ತೇನೆ. ಅಂದರೆ ನಾನೇ ಅವರೆಲ್ಲ ಆಟಕ್ಕೆ ಯೋಜನೆ ರೂಪಿಸುತ್ತೇನಾ ಎನ್ನುವ ಪ್ರಶ್ನೆಗಳು ಇವೆ. ಒಟ್ಟಾರೆ ಪಾತ್ರ ಮತ್ತು ಕಥೆ ಇಷ್ಟ ಆಗಿದೆ.

■ **ರಾಘವೇಂದ್ರ ಕೆ.**